''Azadi Ka Amrit Mahotsav''
INDIA@75
ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 02-07.2021

# ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 03–07–2021 ರಿಂದ 07–07–2021 ವರೆಗೆ)

| ನಿಯತಾಂಕಗಳು | 03.07.2021 | 04.07.2021 | 05.07.2021 | 06.07.2021 | 07.07.2021 |
|---|---|---|---|---|---|
| ಮಳೆ (ಮಿ ಮಿ) | 6 | 5 | 4 | 1 | 1 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 30 | 29 | 29 | 29 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 21 | 21 | 21 | 21 |
| ಮೋಡ ( ಪ್ರಮಾಣ) | 7 | 7 | 6 | 6 | 6 |
| ಅರ್ದ್ರತೆ 7.20 ಬೆ (ಶೇ) | 81 | 81 | 80 | 80 | 80 |
| ಅರ್ದ್ರತೆ 2.20 ಮ (ಶೇ) | 59 | 59 | 58 | 58 | 58 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 2 | 3 | 2 | 2 | 2 |
| ಗಾಳಿಯ ದಿಕ್ಕು ( ಡಿಗ್ರಿ) | 270 | 292 | 288 | 288 | 257 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 29.0–30.0$^{o}$ C ಮತ್ತು ಕನಿಷ್ಠ 21.0$^{o}$ C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **80-81 %** ಇದ್ದು ಮಧ್ಯಾಹ್ನ **58-59 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2–3** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

- ಪುನರ್ವಸು ನಕ್ಷತ್ರದ ಮಳೆಯ ಕಾಲವು ಜುಲೈ ತಿಂಗಳ 06 ರಿಂದ ಜುಲೈ 19 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 48.3 ಮಿ.ಮೀ. ವರೆಗೆ ಮಳೆಯಾಗುತ್ತದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ ಹೆಬ್ಬೇವು, ಸಿಲ್ವರ್ ಓಕ್ ಮತ್ತು ಸರ್ವೆ ಮರಗಳನ್ನು ನೆಡುವುದು ಸೂಕ್ತ.<br>➢ ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ/ಸುತ್ತಲು ಮಾವು(ಮಲ್ಲಿಕ ಮತ್ತು ಬಾದಾಮಿ ಕಸಿ ಗಿಡ) ಬೆಳೆಯುವುದು ಸೂಕ್ತ.<br>➢ ಎರಡು ಬೆಳೆ ಪದ್ಧತಿಗಳು: ಆಳವಾದ ಮಣ್ಣನ್ನು ಹೊಂದಿರುವ ಹಾಗೂ 5–6 ತಿಂಗಳುದ್ದಕ್ಕೂ ಮಳೆ ಸಮನಾಗಿ ಬೀಳುವ ಪ್ರದೇಶಗಳಲ್ಲಿ ಎರಡು ಬೆಳೆ ಪದ್ಧತಿಯನ್ನು ಅನುಸರಿಸಬಹುದು.<br>➢ ಎರಡು ಬೆಳೆ ಪದ್ಧತಿ ಅನುಸರಿಸುವ ರೈತರುಸದಾ ಜಾಗರೂಕರಾಗಿ, ಬೀಳುವ ಮಳೆಯನ್ನು ಸಂರಕ್ಷಣೆ ಮಾಡಿಕೊಂಡು ಹೆಚ್ಚಿನ ಖರ್ಚು ಭರಿಸಲು ಸಿದ್ಧವಿದ್ದಲ್ಲಿ ವರ್ಷದಲ್ಲಿ ಎರಡು ಬೆಳೆಗಳನ್ನು ಖುಷ್ಕಿ ಪ್ರದೇಶದಲ್ಲಿಯೂ ತೆಗೆದುಕೊಳ್ಳಲು ಸಾಧ್ಯ.<br>➢ ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು ( ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.<br>➢ ಎಲ್ಲೆಲ್ಲಿ ಶಿಫಾರಿಸಿಗಿಂತ ಹೆಚ್ಚು ಗಿಡಗಳ ಸಂಖ್ಯೆ ಇದೆಯೋ ಅಲ್ಲಿ ಬೆಳೆ ಸಸಿಗಳ ಸಂಖ್ಯೆಯನ್ನು ಕಡಿಮೆಗೊಳಿಸುವುದರಿಂದ ಮಣ್ಣಿನ ತೇವಾಂಶದ ಸದ್ಬಳಕೆ ಮಾಡಿಕೊಳ್ಳಬಹುದು.<br>➢ **ಏಕಬೆಳೆ ಪದ್ಧತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5<br>ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಕಾಂಪೋಸಿಟ್ ಎನ್.ಎ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ. |

| | |
|---|---|
| | ➢ **ಎರಡುಬೆಳೆ ಪದ್ಧತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ನೆಲಗಡಲೆ: ಟಿ.ಎಂ.ವಿ–2, ಜೆ.ಎಲ್–24 ಮತ್ತು ಕೆ.ಸಿ.ಜಿ–6<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>➢ ತೊಗರಿ ಬಿತ್ತನೆಗೆ ಮುಂಚೆ ಬೀಜೋಪಚಾರ ಮಾಡುವುದು ಉತ್ತಮ, ಕಾರ್ಬೆನ್‌ಡೈಜಿಮ್ ಅಥವಾ ಥೈರಾಮ್ @ 2 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಉಪಚರಿಸಿ, ಮತ್ತು ಜೈವಿಕ ಕೀಟನಾಶಕಗಳಾದ ಟ್ರೈಕೋಡರ್ಮ ವಿರಿಡೆ @ 4 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಅಥವಾ ಸುಡೋಮೋನಾಸ್ ಫ್ಲುರೆಸೆನ್ಸ್ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಮತ್ತು ರೈಝೋಬಿಯಂ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಬೆರೆಸಿ ಉಪಚರಿಸಿ. |
| **ಮಾವು** | ➢ ಮಾವಿನಲ್ಲಿ ಒತ್ತಾಗಿ ಬೆಳೆದಿರುವ ರೆಂಬೆಗಳನ್ನು ಕತ್ತರಿಸಬೇಕು ಇದರಿಂದ ಸೂರ್ಯನ ಬೆಳಕು ಒಳಬಾಗಕ್ಕೆ ಬೀಳುತ್ತದೆ ಇದರಿಂದ ಒಳಭಾಗದಲ್ಲೂ ಮುಂದಿನ ಬಾರಿ ಹೂ ಮತ್ತು ಕಾಯಿ ಕಚ್ಚುತ್ತವೆ.<br>➢ ಗಿಡಗಳ ಸುತ್ತಲು ಪಾತಿ ಮಾಡಿ, ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಮಳೆಗಾಲ(ಜೂನ್–ಜುಲೈ) ದಲ್ಲಿ ಒದಗಿಸಬೇಕು.<br>ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | ➢ **ಗಂಟಲು ಬೇನೆ:** ಪ್ರತಿ ವರ್ಷವೂ ಈ ರೋಗ ಮುಂಗಾರು ಮಳೆ ಪ್ರಾರಂಭದಲ್ಲಿ ( ಜೂನ್ ಮತ್ತು ಜುಲೈ) ಉಲ್ಬಣವಾಗುವುದರಿಂದ ಗಂಟಲು ಬೇನೆ ಲಸಿಕೆಯನ್ನು ಮೇ ತಿಂಗಳಿನಲ್ಲಿ ಮಾಡಿಸುವುದು.<br>➢ **ಚಪ್ಪೆ ರೋಗ :** ಈ ರೋಗವು ಬ್ಯಾಕ್ಟೀರಿಯಾದಿಂದ ಹರಡುತ್ತದೆ.<br>ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಹರಡುತ್ತದೆ. ಸಾಮಾನ್ಯವಾಗಿ ಈ ರೊಗವು ಮಳೆಗಾಲದ ಕೊನೆಯಲ್ಲಿ ಕಾಣುತ್ತದೆ. ಚಪ್ಪೆ ರೋಗದ ಲಸಿಕೆಯನ್ನು ಪ್ರತಿ ವರ್ಷವೂ ಜೂನ್/ಜುಲೈ ತಿಂಗಳಲ್ಲಿ ಮಾಡಿಸುವುದು. |


**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಫ್:**

- ➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.